ವಿಜಯವಾಣಿ ನಂ.1



# ನಿಖಿಲಾ ಭರತನಾಟ್ಯ ರಂಗಪ್ರವೇಶ

## ಏರೋಸ್ಪೇಸ್ ವಿದ್ಯಾರ್ಥಿನಿಯ ನೃತ್ಯಪ್ರೀತಿ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಕೀಬೋರ್ಡ್ ನುಡಿಸುವುದು ಮತ್ತು ಚಿತ್ರಕಲೆ ನೆಚ್ಚಿನ ಹವ್ಯಾಸಗಳು. ಕಾಲೇಜಿನಲ್ಲಿ ಸತತ ಎರಡು ಬಾರಿ ಪ್ರತಿಭಾ ಪುರಸ್ಕಾರ ಪ್ರಶಸ್ತಿ. ಶ್ರೀಹರಿಕೋಟಾದ ಇಸ್ರೋ ಸಂಸ್ಥೆಯಲ್ಲಿ ಪ್ರಬಂಧ ಮಂಡನೆ. ಜೈನ್ ವಿವಿಯಲ್ಲಿ ನಡೆದ 'ಇನ್ವೆಂಟಿಕ್' ಸ್ಪರ್ಧೆಯಲ್ಲಿ ಪ್ರಶಸ್ತಿ. ಕಾಲೇಜು ಹಾಗೂ ಕೇಂದ್ರೀಯ ವಿದ್ಯಾಲಯ ವಲಯ ಮಟ್ಟದ ಬಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಬಹುಮಾನ.. ಇದು ಮಹಾವೀರ್ ಜೈನ್ ವಿಶ್ವವಿದ್ಯಾಲಯದ ಏರೋಸ್ಪೇಸ್ ವಿಭಾಗದ 3ನೇ ವರ್ಷದ ತಾಂತ್ರಿಕ ಪದವಿ ವಿದ್ಯಾರ್ಥಿನಿ ನಿಖಿಲಾ ಪ್ರಿಯದರ್ಶಿನಿ ಪರಿಚಯ. ಇಷ್ಟು ಮಾತ್ರವಲ್ಲ, ಭರತನಾಟ್ಯದಲ್ಲೂ ಈ ಯುವಪ್ರತಿಭೆ ಎತ್ತಿದ ಕೈ. ಇಂದು (ಮೇ 21) ನಿಖಿಲಾಗೆ ರಂಗಪ್ರವೇಶದ ಸಂಭ್ರಮ.

6ನೇ ವಯಸ್ಸಿನಿಂದ ನೃತ್ಯಾಸಕ್ತಿ ಬೆಳೆಸಿಕೊಂಡ ನಿಖಿಲಾ, ಮಂಗಳೂರಿನ ಪ್ರತಿಮಾ ಅವರಲ್ಲಿ ಆರಂಭಿಕ ಶಿಕ್ಷಣ ಪಡೆದರು. ಬಳಿಕ, ಎಂ. ಸ್ವಾಮಿ ಬಳಿ 12 ವರ್ಷಗಳಿಂದ ನರ್ತನ ಕಲೆಯ ಪಟ್ಟುಗಳನ್ನು ಕರಗತ ಮಾಡಿಕೊಂಡು, ಈಗ ರಂಗಪ್ರವೇಶದ ಘಟ್ಟ ತಲುಪಿದ್ದಾರೆ. ಲಕ್ಷ್ಮೀ ಕೆ.ಸಿ. ಮತ್ತು ರವಿ ಎ.ಎಸ್. ಅವರ ಮುದ್ದಿನ ಮಗಳಾದ ನಿಖಿಲಾ ಕಮಲಾನಗರ ಗುಡ್ಡದ ಗಣಪತಿ ದೇವಸ್ಥಾನದ ಬಳಿ ಇರುವ (ಕರ್ನಾಟಕ ಇಂಜಿನಿಯರ್ಸ್ ಅಕಾಡೆಮಿ) ಕೆಇಎ ಪ್ರಭಾತ್ ರಂಗಮಂದಿರದಲ್ಲಿ ಸಂಜೆ 6ಕ್ಕೆ ನೃತ್ಯ ಪ್ರಸ್ತುತಪಡಿಸಲಿದ್ದಾರೆ.

## ಪ್ರಭಾತ್ ರಂಗಮಂದಿರದಲ್ಲಿ ಇಂದು ಆಯೋಜನೆ

ನಾಟ್ಯದೇಗುಲ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಐಐಎಇಎಂ ಜೈನ್ ವಿವಿ ನಿರ್ದೇಶಕ ಪ್ರೊ.ಕೆ.ಆರ್. ಶ್ರೀಧರಮೂರ್ತಿ, ಹಿರಿಯ ರಂಗಕರ್ಮಿ- ಚಲನಚಿತ್ರ ನಟಿ ಬಿ. ಜಯಶ್ರೀ, ಸಾಧನ ಸಂಗಮ ನೃತ್ಯ- ಯೋಗ ಕೇಂದ್ರದ ಜ್ಯೋತಿ ಪಟ್ಟಾಭಿರಾಮ, ನೃತ್ಯ ಗಂಗೋತ್ರಿ ನಿರ್ದೇಶಕ ಡಾ.ಎ.ಎನ್. ಸುಧೀರ್‌ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

Namaste Bengaluru
Page No. 2 May 21, 2017
Powered by: erelego.com